**ಸಾಕ್ಷಿಯನ್ನು ದಿಃ 06.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀಮತಿ ಸಿ ಸಿ ವಕೀಲರಿಂದಃ**

1) ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ಸರ್ವೆ ನಂ. 50/ಪಿ9 ರ ಪಹಣಿ ಪತ್ರಿಕೆಯ ಜೆರಾಕ್ಸ್ ಪ್ರತಿಯನ್ನು ತೋರಿಸಲಾಗಿ ಅದರಲ್ಲಿ ನಿಂಗೇಗೌಡ ಉಃ ಚಂದ್ರೇಗೌಡ ಬಿನ್ ನಂಜೇಗೌಡರವರ ಹೆಸರಿಗೆ 35 ಗುಂಟೆ ನಮೂದು ಇದೆ ಎಂದು ಒಪ್ಪಿದ್ದು ಸದರಿ ದಾಖಲೆಯನ್ನು ನಿಪಿ-20 ಎಂದು ಗುರುತಿಸಲಾಯಿತು. ನನ್ನ ಮುಖ್ಯ ವಿಚಾರಣೆಯ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಭಾಗ್ಯಮ್ಮ ರವರು ಕೃಷ್ಣೇಗೌಡ ಮತ್ತು ಹರೀಶ್ ರವರ ಸಂಬಂಧ ದಾವೆ ಹೂಡಿರುತ್ತಾರೆ. ಯಾವ ಪರಿಹಾರಕ್ಕಾಗಿ ಎಂದು ಗೊತ್ತಿಲ್ಲ.

2) ನಿಂಗೇಗೌಡರವರಿಗೆ ಪಿತ್ರಾರ್ಜಿತವಾಗಿ ಸರ್ವೆ ನಂ. 90 ರಲ್ಲ 30 ಗುಂಟೆ ವಿಸ್ತೀರ್ಣ, ಸರ್ವೆ ನಂ. 50/1 ರಲ್ಲಿ 10 ಗುಂಟೆ ವಿಸ್ತೀರ್ಣ ಬಂದಿರುತ್ತದೆ. ನಿಂಗೇಗೌಡರವರಿಗೆ ಸ್ವಯಾರ್ಜಿತವಾಗಿ ಯಾವ ಸ್ವತ್ತುಗಳು ಇದ್ದವು ಎಂದು ಗೊತ್ತಿಲ್ಲ. ಸರ್ವೆ ನಂ. 50/1 ಹಾಗೂ ಸರ್ವೆ ನಂ. 93 ರ ಮ್ಯುಟೇಷನ್ ರಿಜಿಸ್ಟರ್ ನೋಡಿಲ್ಲ. ದಿಃ 14.03.2000 ರ ಕ್ರಯಪತ್ರದ ಮಾತುಕತೆಗೆ ಸೇರಿಲ್ಲ ಮತ್ತು ಸಾಕ್ಷಿದಾರರಾಗಿ ಸಹಿ ಮಾಡಿಲ್ಲ.

3) ಸರ್ವೆ ನಂ. 50/1 ರ 10 ಗುಂಟೆ ವಿಸ್ತೀರ್ಣದ ಚೆಕ್ಕುಬಂಧಿ ಪೂರ್ವಕ್ಕೆ - ರಸ್ತೆ, ಪಶ್ಚಿಮಕ್ಕೆ - ಬಿ ಎ ಜಯಣ್ಣ, ಉತ್ತರಕ್ಕೆ- ಕೃಷ್ಣೇಗೌಡ ರವರ ಜಮೀನು, ದಕ್ಷಿಣಕ್ಕೆ - ತೂಬಿನ ಕೆರೆ ಗಡಿ ಇದೆ. ಸರ್ವೆ ನಂ. 93 ರ 30 ಗುಂಟೆ ವಿಸ್ತೀರ್ಣದ ಚೆಕ್ಕುಬಂಧಿ ಪೂರ್ವಕ್ಕೆ - ರಸ್ತೆ, ಪಶ್ಚಿಮಕ್ಕೆ - ಬಿ ಎ ಜಯಣ್ಣ, ಉತ್ತರಕ್ಕೆ- ಶಿವರಾಜು ಮತ್ತು ಗಣಸಿಗೌಡರವರ ಜಮೀನು, ದಕ್ಷಿಣಕ್ಕೆ - ಸರ್ವೆ ನಂ. 50/1 ರ ಜಮೀನು ಇದೆ. ದಿಃ 14.03.2000 ರ ಕ್ರಯಪತ್ರ ನೋಡಿದ್ದೇನೆ. ಸದರಿ ಕ್ರಯಪತ್ರದಲ್ಲಿ ನಾನು ಈಗ ಮೇಲೆ ತಿಳಿಸಿರುವ ಚೆಕ್ಕುಬಂದಿ ನಮೂದು ಇರುವುದು ನೋಡಿರುತ್ತೇನೆ.

4) ನಿಂಗೇಗೌಡರವರಿಗೆ ಸರ್ವೆ ನಂ. 50/1 ಮತ್ತು ಸರ್ವೆ ನಂ. 50/2 ರಲ್ಲಿ ಒಟ್ಟು 35 ಗುಂಟೆ ವಿಸ್ತೀರ್ಣ ಮಂಜೂರಾಗಿರುವ ಬಗ್ಗೆ ಗೊತ್ತಿಲ್ಲ. ಮಂಜೂರಾದ ನಂತರ ವಾದಿಯ ಗಂಡ ನಿಂಗೇಗೌಡ ರವರಿಗೆ ಮ್ಯುಟೇಷನ್ ಸಹ ಆಗಿರುವ ಬಗ್ಗೆ ನೋಡಿಲ್ಲ. ಈಗಲೂ ಭಾಗಮ್ಮ ರವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಿಃ 14.03.2000 ದ ಸ್ವತ್ತು ಮತ್ತು ದಾವಾ ಸ್ವತ್ತು ಬೇರೆ ಬೇರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆರದು ಅಲ್ಲಿ ಬೇರೆ ಯಾವುದೇ ಸ್ವತ್ತು ಇಲ್ಲ ಎನ್ನುತ್ತಾರೆ.

5) ಸರ್ವೆ ನಂ. 50 ರಲ್ಲಿ ಎಷ್ಟು ವಿಸ್ತೀರ್ಣ ಮತ್ತು ಯಾರು ಯಾರಿಗೆ ಮಂಜೂರಾಗಿರುವ ಬಗ್ಗೆ ತಿಳಿದುಕೊಂಡಿಲ್ಲ. ಸರ್ವೆ ನಂ. 50 ರಲ್ಲಿ ಮೊದಲು ವಾದಿಯ ಗಂಡ ಸುಮಾರು 4-5 ಗುಂಟೆ ವಿಸ್ತೀರ್ಣದಲ್ಲಿ ಸಾಗುವಳಿ ಮಾಡುತ್ತಿದ್ದು ನಂತರ 1ನೇ ಪ್ರತಿವಾದಿ ಸಾಗುವಳಿ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆ ನೋಡಿರುವುದಿಲ್ಲ. ಅಲ್ಲಿ 10 ಗುಂಟೆ ಬಿಟ್ಟರೆ ಯಾವುದೇ ಜಮೀನು ಇರುವುದಿಲ್ಲ. ದಾವಾ ಸ್ವತ್ತಿನ ಅಕ್ಕಪಕ್ಕ ನನ್ನ ಯಾವುದೇ ಸ್ವತ್ತು ಇಲ್ಲ. ದಾವಾ ಸ್ವತ್ತಿನಲ್ಲಿ ವಾದಿಯು ಸ್ವಾಧೀನಾನುಭವದಲ್ಲಿದ್ದು ಪ್ರತಿವಾದಿಯರು ತೊಂದರೆ ನೀಡಿದ್ದರಿಂದ ಈ ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಗೊತ್ತಿಲ್ಲ. ಸಾಕ್ಷಿ ಮುಂದುವೆರದು ಅಲ್ಲಿ ಯಾವುದೇ ಜಮೀನು ಇಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಕುಸುಮ ವಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**